# 7

# ನ್ಯಾಯಸ್ಥಾಪಕರ ಕಾಲಾವಧಿ

## ಯೆಹೋಶುವನ ಮರಣದಿಂದ ಸೌಲನ ಅಭಿಷೇಕದವರೆಗೆ

## ಕ್ರಿ.ಪೂ. 1400-1095 (ನ್ಯಾಯಸ್ಥಾಪಕರು, ರೂತಳು, 1 ಸಮುವೇಲ 1-10)

### I. ಧಾರ್ಮಿಕ ಸ್ಥಿತಿ.

ಇಸ್ರಾಯೇಲಿನ ಧಾರ್ಮಿಕ ಪರಿಸ್ಥಿತಿಯನ್ನು ಹೀಗೆ ಸಂಕ್ಷೇಪಿಸಬಹುದು:

**1. ವಿಗ್ರಹಾರಾಧನೆಯೊಳಗೆ ಪುನಃ ಭ್ರಷ್ಟರಾದದ್ದರ ಸರಣಿ.**-ಇವುಗಳಲ್ಲಿ ಕಾರಣಗಳು ಕಂಡು ಬರುತ್ತವೆ

*a. ಅವರ ವಿಗ್ರಹಾರಾಧಕ ಪಿತೃವಂಶ* (ಹೋಲಿಸು ಆದಿಕಾಂಡ 31:19; 35:2; ಯೆಹೋಶುವ 24:2-14).-ಅಬ್ರಹಾಮನು ವಿಗ್ರಹಾರಧನೆಯನ್ನು ತ್ಯಜಿಸಿದ್ದನು, ಆದರೆ ಯಾಕೋಬನ ಮದುವೆಯಿಂದ ಅದು ಕುಟುಂಬ ಜೀವಿತದಲ್ಲಿ ಪುನಃ ಪ್ರವೇಶಿಸಿತು; ಮತ್ತು ಯಾಕೋಬನು ವಿಗ್ರಹಗಳನ್ನು ಹೂತಿಟ್ಟಿದ್ದರೂ, ಅದರ ಕೆಲವು ಕುರುಹುಗಳು ಬಹುಶಃ ಮುಂದುವರಿದಿದ್ದವು.

*b. ಅವರ ಐಗುಪ್ತದ ದಾಸತ್ವ* (ಹೋಲಿಸು ವಿಮೋಚನಕಾಂಡ 32:21-34; ಯೆಹೋಶುವ 24:14).-ಸಿನಾಯಿ ಬೆಟ್ಟದ ಬಳಿಯಲ್ಲಿ ಅಷ್ಟು ಬೇಗನೇ ಮತ್ತು ಅಷ್ಟು ಕೀಳು ಮಟ್ಟದಲ್ಲಿ ಬಿದ್ದು ಹೋಗುವುದಕ್ಕೆ ಅವರು ವಿಗ್ರಹರಾಧನೆಯಿಂದ ಇಸ್ರಾಯೇಲ್ಯರು ಅಷ್ಟು ಆಳವಾಗಿ ಪ್ರಭಾವಿತರಾದದ್ದು ಕಾರಣವಾಗಿದೆ; ಯೆಹೋಶುವನ ಭಾಷಣವು ಅರಣ್ಯದಲ್ಲಿಯ ಶಿಕ್ಷೆಯು ಅದನ್ನು ಸಂಪೂರ್ಣವಾಗಿ ತೆಗೆದು ಹಾಕಲಿಲ್ಲ ಎಂಬುದಕ್ಕೆ ಮುಕ್ತಾಯದ ಪುರಾವೆಯಾಗಿದೆ.

*c. ಕಾನಾನ್ಯ ಕುಲಗಳ ಮಲಿನಗೊಳಿಸುವಿಕೆ.*-ಕಾನಾನು ಆ ಸಮಯಗಳಲ್ಲಿ ಅತಿಯಾಗಿ ಕೆಟ್ಟುಹೋದ ಧರ್ಮದ ಕೇಂದ್ರವಾಗಿತ್ತು. ಕಾರ್ತೇಜ್, ಗ್ರೀಸ್ ಮತ್ತು ರೋಮ್‌ಗಳು ಅದರಿಂದ ತಮ್ಮ ಧರ್ಮಗಳ ವಿಷಯ ಲಂಪಟ ಲಕ್ಷಣಗಳನ್ನು ಪಡೆದು ಕೊಂಡವು. ಆದುದರಿಂದ ಕಾನಾನ್ಯರನ್ನು ಹೊರದೋಡಿಸುವ ಅಥವಾ ಧ್ವಂಸಮಾಡುವ ದೈವಿಕ ಆಜ್ಞೆಯು ಕೊಡಲ್ಪಟ್ಟಿದು. ಅದು ಇಸ್ರಾಯೇಲಿಗೆ ಕೇವಲ ಸುರಕ್ಷಿತತೆಯಾಗಿತ್ತು. ಅಮೋರಿಯರ ಅಪರಾಧವು ತುಂಬಿಹೋಗಿತ್ತು. ಆಜ್ಞೆಗೆ ವಿಧೇಯರಾಗುವಲ್ಲಿ ಸೋತು ಹೋದದ್ದು ಮತ್ತು ಅನಂತರ ಬಂದ ಅಂತರ್ವಿವಾಹಗಳು ಶುದ್ಧ ಧರ್ಮಕ್ಕೆ ನಿರಂತರ ಗಂಡಾಂತರಗಳಾಗಿದ್ದವು.

**2. ಪರಿಣಾಮವಾಗಿ ಬಂದ ದಬ್ಬಾಳಿಕೆಗಳ ಒಂದು ಸರಣಿ.**-ನೆರೆಯ ಕುಲಗಳಿಂದ ಬಂದ ಈ ದಬ್ಬಾಳಿಕೆಗಳು ಸ್ವಾಭಾವಿಕ ಪರಿಣಾಮವಾಗಿದ್ದವು. ನೈತಿಕವಾಗಿ ಬಲಹೀನವಾದದ್ದು ರಾಜಕೀಯವಾಗಿ ಬಲಹೀನವಾಯಿತು, ಅವು ಶಿಕ್ಷೆಯ ನ್ಯಾಯತೀರ್ಪುಗಳೂ ಆಗಿದ್ದವು. ಪುನಃ ಪುನಃ ಮೋವಾಬ್ಯರಿಂದ, ಇಲ್ಲವೇ ಮಿದ್ಯಾನ್ಯರಿಂದ ಇಲ್ಲವೇ ಫಿಲಿಷ್ಟಿಯರಿಂದ

ಪಶ್ಚತ್ತಾಪಕ್ಕೆ ದಂಡಿಸಲ್ಪಟ್ಟ ಇಸ್ರಾಯೇಲ್ಯರು ತಮ್ಮನ್ನು ದಂಡಿಸಿದವರ ವಿಗ್ರಹಾರಾಧನೆಯಿಂದ ಯೆಹೋವನ ಆರಾಧನೆಗೆ ತಿರುಗಿಕೊಂಡರು, ದೀರ್ಘಾವಧಿಯ ನಂತರ ಹೆಚ್ಚು ಶುದ್ಧವಾದ ನಂಬಿಕೆಯು ಜಯ ಸಾಧಿಸಿತು.

**3. ನ್ಯಾಯಸ್ಥಾಪಕರು ಎಂದು ಕರೆಯಲ್ಪಟ್ಟ ವಿಮೋಚಕರ ಒಂದು ಸರಣಿ.**-ಇವರು ಆದರ್ಶ ಪುರುಷರಾಗಿರಲಿಲ್ಲ. ಇವರು ಕ್ರೈಸ್ತ ನಂಬಿಕೆಯ ವೀರರಿಗಿಂತ ಕೆಳಮಟ್ಟದಲ್ಲಿದ್ದರು. ಆಗಾಗ ಮೂಢ ನಂಬಿಕೆಯುಳ್ಳವರೂ, ಆವೇಶವುಳ್ಳವರೂ ನೈತಿಕವಾಗಿ ಬಲಹೀನರೂ ಆಗಿದ್ದಾಗ್ಯೂ ದೇವರಲ್ಲಿ ನಂಬಿಕೆಯುಳ್ಳವರಾಗಿದ್ದರು. ಅಂಥ ಸಮಯಗಳಲ್ಲಿ ಅದು ಹೆಚ್ಚಾಗಿತ್ತು. ಪೌಲ ಇಲ್ಲವೇ ಲೂಥರ್ *ಅವರು* ತಮ್ಮ ಯುಗಕ್ಕಿಂತ ಹೆಚ್ಚಿನ ಮಟ್ಟಕ್ಕೆ ಏರಿದಂತೆ ಅವರು ತಮ್ಮ ಯುಗಕ್ಕಿಂತ ಹೆಚ್ಚಿನ ಮಟ್ಟಕ್ಕೇರಿದರು, ಮತ್ತು ಹೀಗೆ ವಿಶ್ವಾಸದ ವೀರರ ಪಟ್ಟಿಯಲ್ಲಿ ಸ್ಥಾನಕ್ಕೆ ಯೋಗ್ಯರಾಗಿದ್ದಾರೆ. ಇದಲ್ಲದೇ, ಅವರು ಸ್ವದೇಶ ನಿಷ್ಠರಾಗಿದ್ದರು. ಅತಿಶಯವಾದ ಜನಾಂಗಿಕ ಹಾಗೂ ಸ್ಥಳಿಕ ಆಸಕ್ತಿಯ ಯುಗದಲ್ಲಿ, ಅವರು ಬಹಳ ಹೆಚ್ಚು ದೇಶಾಭಿಮಾನಕ್ಕೆ ಏರಿದರು. ಅವರು ತಮ್ಮ ಸಮಯದ ಟೆಲ್ಲರೂ ವ್ಯಾಲ್ಲೇಸರೂ ಮತ್ತು ವಾಶಿಂಗ್‌ಟನ್ಸ್‌ರೂ ಆಗಿದ್ದರು.

## II. ರಾಜಕೀಯ ಪರಿಸ್ಥಿತಿ.

ರಾಜಕೀಯವಾಗಿ ಯಾವುದೇ ರಾಷ್ಟ್ರೀಯ ಸಂಘಟನೆಯಾಗಲಿ, ರಾಷ್ಟ್ರೀಯ ರಾಜಧಾನಿಯಾಗಲೀ, ರಾಷ್ಟ್ರೀಯ ಮುಖ್ಯಸ್ಥನಾಗಲೀ ಇರಲಿಲ್ಲ. ಮೋಶೆಯು ಧಾರ್ಮಿಕ ಪದ್ಧತಿಯನ್ನು ಕೊಟ್ಟನು, ಆದರೆ ಚೆನ್ನಾಗಿ ನಿರೂಪಿಸಿದ ರಾಜಕೀಯವಾದ ನೀತಿಯಿರಲಿಲ್ಲ. ಅವರು ಹನ್ನೆರಡು ಕುಲಗಳಾಗಿದ್ದರು, ಕೆಲವು ಸಲ ಪರಸ್ಪರ ರಕ್ಷಿಸಿಕೊಳ್ಳುವುದಕ್ಕಾಗಿ ಒಂದಾಗುತ್ತಿದ್ದರು, ಕೆಲವು ಸಲ ಪರಸ್ಪರ ನಾಶಪಡಿಸಿಕೊಳ್ಳುವಷ್ಟರ ಮಟ್ಟಿಗೆ ಹೋರಾಡುತ್ತಿದ್ದರು. ಎಗ್ಬರ್ಟನ್ ಅಧೀನತೆಯಲ್ಲಿ ಐಕ್ಯವಾಗುವ ಮೊದಲು ಆಂಗ್ಲೋ - ಸ್ಯಾಕ್ಷನ್ ಹೆಪ್ಟಾರ್ಕಿಮೆ ಹೋಲಿಕೆಯ ಪರಿಸ್ಥಿತಿ ಅದಾಗಿತ್ತು. ಹೀಗಿದ್ದರೂ ಮೂರು ಬಂಧನಗಳು ಹಲವಾರು ಚಿಕ್ಕ ದೇಶಗಳಾಗಿ ಮುರಿದು ಹೋಗುವುದನ್ನು ತಪ್ಪಿಸಿದವು, ಅಂದರೆ:

*a. ಒಂದು ಹುದುವಾದ ವಂಶಪರಂಪರೆ ಮತ್ತು ಇತಿಹಾಸ.*-ಅಬ್ರಹಾಮನು ಜನಾಂಗದ ಸ್ಥಾಪಕನಾಗಿದ್ದನು; ಇಸಾಕನಿಗಾಗಿ ಮತ್ತು ಯಾಕೋಬನಿಗಾಗಿ ತಮ್ಮ ಗೌರವವನ್ನು ಸಮನಾಗಿ ಹಂಚಿಕೊಂಡರು; ಯೋಸೇಫ, ಮತ್ತು ಮೋಶೆ ಮತ್ತು ಯೆಹೋಶುವ ಮತ್ತು ಕೆಂಪು ಸಮುದ್ರದ ಮಹಿಮೆಗಳು, ಯೊರ್ದನ್ ಮತ್ತು ಜಯ ಇಂಥವುಗಳ ಹೆಸರುಗಳು ಪಿತ್ರಾರ್ಜಿತ ಬಾಧ್ಯತೆಗಳಾಗಿದ್ದವು.

*b. ಒಂದು ಹುದುವಾದ ಭಾಷೆ, ಹಿಬ್ರೂ.*-ಭಿನ್ನವಾದ ಉಪಭಾಷೆಗಳ ಕುರುಹುಗಳು ಇರುತ್ತವೆ, ಆದರೆ ಆಲ್‌ಫ್ರೆಡ್ಸ್‌ನ ಸಮಯದಲ್ಲಿ ಇಂಗ್ಲಾಂಡಿನಲ್ಲಿ ಇದ್ದಷ್ಟು ಭಿನ್ನತೆಗಳು ಇರಲಿಕ್ಕಿಲ್ಲ.

*c. ಒಂದು ಹುದುವಾದ ಧರ್ಮ.*-ದೇವದರ್ಶನ ಗುಡಾರವು ಶಿಲೋಮಿನಲ್ಲಿ ಹಾಕಲ್ಪಟ್ಟಿತು. ಒಂದು ಯಜ್ಞವೇದಿಯಿತ್ತು ಅಲ್ಲಿ ಜನಾಂಗದ ಒಬ್ಬ ಮಹಾಯಾಜಕನು ವಾಸಿಸಿದ್ದನು. ಅಲ್ಲಿ ದಿನವೂ ಜನಾಂಗಿಕ ಯಜ್ಞಗಳು ಅರ್ಪಿಸಲ್ಪಡುತ್ತಿದ್ದವು. ಅಲ್ಲಿಗೆ ಕುಲಗಳ ಪ್ರತಿನಿದಿಗಳು ಮೂರು ದೊಡ್ಡ ವಾರ್ಷಿಕ ಹಬ್ಬಗಳಿಗೆ ಹೋಗುತ್ತಿದ್ದರು. ಅಂಥ ಕೇಂದ್ರಕ್ಕೆ ಬರುವ ಒತ್ತಡಗಳು ಕೆಲಸ ಮಾಡುತ್ತಿದ್ದವು. ಗ್ರೀಕರಿಗೂ ಅಂಥವೇ ಬಂಧನಗಳಿದ್ದವು; ಆದರೆ ಭೌಗೋಳಿಕ ಪರಿಸ್ಥಿತಿಗಳು ಬೇಗನೇ ಆಳವಾದ ವೈಯಕ್ತಿಕತೆಗಳನ್ನು ಬೆಳಸಿದವು. ಅವು ಒಂದು ಜನಾಂಗವನ್ನು ಕಟ್ಟಲು ಎಂದೂ ಸಹಾಯ ಮಾಡಲಿಲ್ಲ.

ಈ ಬಂಧನಗಳು ರಾಜಕೀಯ ಸಂಘಟನೆಗಾಗಿ ಅವರನ್ನು ಬೆಸೆಯಲು ಪ್ರವಾದಿ ಸಮುವೇಲನಲ್ಲಿ ಮತ್ತು ಅರಸ ದಾವೀದನಲ್ಲಿ ಕಂಡುಬರುವವರೆಗೆ ಇಬ್ರಿಯರನ್ನು ಹಿಡಿದಿದ್ದವು.

## III. ಆರು ಪ್ರಮುಖ ದಾಳಿಗಳು.

ಈ ಒರಟಾದ ಆದರೆ ಜನಾಂಗಿಕ ಜೀವನದ ರೂಪಿಸುವಿಕೆಯ ಅವಧಿಯಲ್ಲಿ, ಹೊರಗಿನಿಂದ ಆರು ಪ್ರಮುಖ ದಾಳಿಗಳಾದವು. ನಾವು ಈಗಾಗಲೇ ನೋಡಿದಂತೆ, ಅವು ನೈಸರ್ಗಿಕ ಪರಿಣಾಮದಂತೆ, ಮತ್ತು ಜನಾಂಗಿಕ ಭ್ರಷ್ಟತೆಗಳಿಗಾಗಿ ದೈವಿಕ ನ್ಯಾಯತೀರ್ಪಿನಂತೆ ಬಂದವು. "ಇಸ್ರಾಯೇಲ್ಯರು ಕರ್ತನ ದೃಷ್ಟಿಯಲ್ಲಿ ಕೆಟ್ಟದ್ದನ್ನು ಮಾಡಿದರು"; "ಇಸ್ರಾಯೇಲ್ಯರು ಕರ್ತನ ಕಡೆಗೆ ಮೊರೆಯಿಟ್ಟರು" - ಇಂಥ ವಾಕ್ಯ ಗಳು, ನ್ಯಾಯಸ್ಥಾಪಕರ ಪುಸ್ತಕದಲ್ಲಿ ಹತ್ತು ಸಲ ಪುನರಾವರ್ತಿಸಲ್ಪಟ್ಟಿವೆ,[1] ಇದು ಇತಿಹಾಸವನ್ನು ಅದರ ನೈತಿಕ ಮಹತ್ವವನ್ನು ಹೊದಿಸುತ್ತದೆ. ಅದೆಲ್ಲವೂ ತೀಕ್ಷ್ಣವಾಗಿ ಮಾನವತೆಯಂತೆ ಕ್ರುಸೇಡರ ಇತಿಹಾಸದಲ್ಲಿ, ಇಲ್ಲವೇ ಸೊರ್ಯನ್ ಕೊಂಕ್ವೆಸ್ಟದಲ್ಲಿ ಒಂದು ಅಧ್ಯಾಯವಾಗಿದೆ; ಆದರೆ ಶ್ರೇಷ್ಠವಾದ ಮಹತ್ವವು ಶಿಕ್ಷಣದಲ್ಲಿರುತ್ತದೆ; ಅದರ ಮೂಲಕವಾಗಿ ಇಸ್ರಾಯೇಲ್ಯರು ಯೆಹೋವನು ತಮ್ಮ ದೇವರಾಗಿರುವ ಒಂದು ಜನಾಂಗವಾದರು.

**1. ಪೂರ್ವದಿಂದ ಮೆಸೊಪೊಟೇಮಿಯನ್ ದಾಳಿ.**-ಅಬ್ರಹಾಮನ ಸಮಯದಲ್ಲಿ ಯೂಫ್ರೇಟೀಸಿನ ಅಧಿಪತಿಗಳು ಯೋರ್ದನಿನವರೆಗೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದ್ದನ್ನೂ ಲೋಟ ನನ್ನು ಒಯ್ದದ್ದನ್ನೂ ನೋಡಿದ್ದೇವೆ. ಐದುನೂರು ವರ್ಷಗಳು ದಾಟಿದವು. ಮಹಾ ಕಣಿ ವೆಯ ಇನ್ನೊಬ್ಬ ಅಧಿಪತಿಯು ಇನ್ನೊಂದು ಪಶ್ಚಿಮದ ದಾಳಿಯನ್ನು ಮಾಡುತ್ತಾನೆ. ಎಂಟು ವರ್ಷಗಳವರೆಗೆ ಇಸ್ರಾಯೇಲ್ಯರು ನೊಗದ ಕೆಳಗೆ ನರಳುತ್ತಾರೆ, ಆಗ ಒತ್ನಿಯೇಲು, ಕಾಲೇಬನ ನೋದರಳಿಯನು ವಿರೋಧಿಸಲು ಅವರನ್ನು ಎಚ್ಚಿಸುತ್ತಾನೆ ಮತ್ತು ದಾಳಿಮಾಡುತ್ತಿರುವವರನ್ನು ಯೂಫ್ರೇಟೀಸಿಗೆ ಹಿಂದಿರುಗಿ ಓಡಿಸುತ್ತಾನೆ.

**2. ದಕ್ಷಿಣ ಪೂರ್ವದಿಂದ ಮೋವಾಬ್ಯರ ದಾಳಿ.**-ಲೋಟನ ವಂಶಜರಾದ ಮೋವಾಬ್ಯರು, ಮೃತ ಸಮುದ್ರದ ಪೂರ್ವದಿಕ್ಕಿನಲ್ಲಿ ವಾಸಿಸುತ್ತಿದ್ದರು. ಎಗ್ಲೋನನ ಅಧೀನತೆಯಲ್ಲಿ ಅವರು ದಕ್ಷಿಣ ಪೂರ್ವದ ಗೋತ್ರಗಳನ್ನು ವಶಪಡಿಸಿಕೊಂಡರು, ಮತ್ತು ಯೊರ್ದನನ್ನು ದಾಟಿ ಬಂದರು ಹಾಗೂ ಯೆರಿಕೋವನ್ನು ಹದಿನೆಂಟು ವರ್ಷಗಳವರೆಗೆ ಸ್ವಾಧೀನ ದಲ್ಲಿಟ್ಟು ಕೊಂಡಿದ್ದರು ಬೆನ್ಯಾಮೀನ್ಯನಾದ ಏಹೂದನು ಗೋತ್ರಗಳ ಕಪ್ಪವನ್ನು ಯೆರಿಕೋವಿನಲ್ಲಿ ಎಗ್ಲೂನನಿಗೆ ಕೊಡಲು ತೆಗೆದುಕೊಂಡು ಹೋದನು. ಒಂದು ರಹಸ್ಯ ಸಂದರ್ಶನದಲ್ಲಿ ಅರಸನನ್ನು ಚೂರಿಯಿಂದ ತಿವಿದು, ಪಶ್ಚಿಮದ ಪರ್ವತಗಳಿಗೆ ತಪ್ಪಿಸಿಕೊಂಡು ಓಡಿಹೋದನು. ಒಂದು ಸೈನ್ಯವನ್ನು ಎಚ್ಚಿಸಿದನು. ಯೊರ್ದನ್ ನದಿಯನ್ನು ದಾಟಿಹೋಗುವ ಸ್ಥಳಗಳನ್ನು ಹಿಡಿದು ಕೊಂಡನು ಮತ್ತು ಕಠಿಣವಾದ ಯುದ್ಧ ದಲ್ಲಿ ಹತ್ತು ಸಾವಿರ ಮೋವಾಬ್ಯರನ್ನು ಕೊಂದು ಹಾಕಿದನು, ಕೊನೆಗೆ ಇದು ದೇಶದ ಆ ಭಾಗಕ್ಕೆ ಸಮಾಧಾನವನ್ನು ಕೊಟ್ಟಿತು. ಎಂಭತ್ತು ವರ್ಷಗಳ ವರೆಗೆ ಸಮಾಧಾನವಿತ್ತು.

**3. ಉತ್ತರದಿಂದ ಕಾನಾನ್ಯರ ದಾಳಿ.**-ಲೇಕ್ ಮೆರೊಮದ ಬಳಿಯಲ್ಲಿ ಯಾಬೀನನ ನಾಯಕತ್ವದಲ್ಲಿಯ ಉತ್ತರದ ಒಕ್ಕೂಟವನ್ನು ಯೆಹೋಶುವನು ಸೋಲಿಸಿದ್ದನು. ಅನಂತರದ ಯಾಬೀನನ ನೇತೃತ್ವದಲ್ಲಿ ಉತ್ತರದ ಕಾನಾನ್ಯರು ಇಪ್ಪತ್ತು ವರ್ಷಗಳ ವರೆಗೆ ಉತ್ತರದ ಗೋತ್ರಗಳ ಮೇಲೆ ದಾಳಿ ಮಾಡಿ, ಬಾಧಿಸಿದರು. ಕೊನೆಗೆ ದೆಬೋರಳು, ಅಪರೂಪದ ನಂಬಿಕೆ ಮತ್ತು ಧೈರ್ಯವುಳ್ಳ ಒಬ್ಬ ಪ್ರವಾದಿನಿಯು, ನಫ್ತಾಲಿ ಕುಲದ

ಬಾರಾಕನನ್ನು ಹುರಿದುಂಬಿಸಿದಳು. ಹತ್ತು ಸಾವಿರ ಜನ ಪುರುಷರ ಸೈನ್ಯವನ್ನು ಕೂಡಿಸಿ, ಅವನು ಅಸ್ಡ್ರಯೆಲೊನ ಬಯಲಿನಲ್ಲಿ ಒಂದು ದೊಡ್ಡ ಜಯ ಹೊಂದಿದನು. ಕಾನಾನ್ಯ ಸೇನಾಪತಿ ಸಿಸೆರನು ಓಡಿಹೋಗಿ, ಕೇನ್ಯನಾದ ಹೆಬೆರನ ಹೆಂಡತಿ ಯಾಯೇಲಳ ಗುಡಾರದೊಳಗೆ ಆಶ್ರಯ ಹುಡುಕಿದನು. ಈಕೆ ಮೋಶೆಯ ಮಾವನಾದ ಇತ್ರೋನನ ವಂಶಜದವಳು. ಯಾಯೇಲಳು ತನ್ನ ಸಮಯದ ಚಾರ್ಲೋಟ್ಟೆ ಕೊರ್ಡೆಯಂತೆ[2] ರುಜುವಾತು ಪಡಿಸಿಕೊಂಡಳು. ಮತ್ತು ಕುಡಾರದ ಒಂದು ಗೂಟವನ್ನು ನಿದ್ರಿಸುತ್ತಿದ್ದ ಸಿಸೇರನ ಕಣತಲೆಯಲ್ಲಿ ಹೊಡೆದು ನೆಲಕ್ಕೆ ನಾಟಿಸಿದಳು. ಒಂದು ವಾಕ್ಚತುರ ಯುದ್ಧ ಸಂಗೀತದಲ್ಲಿ ಜಯವು ದೆಬೋರಳಿಂದ ಆಚರಿಸಲ್ಪಟ್ಟಿತು (ನ್ಯಾಯಸ್ಥಾಪಕರು 5).

**4. ಪೂರ್ವದಿಂದ ಮಿದ್ಯಾನ್ಯರ ದಾಳಿ.**-ಮಿದ್ಯಾನ್ಯರು ಅರಬರಾಗಿದ್ದರು, ಅಬ್ರಹಾಮನ ಹೆಂಡತಿ ಕೆಟೂರಳಿಂದ ವಂಶಜನಾಗಿದ್ದರು. ದೇಶದಲ್ಲಿ ಅವರು ನೆಲೆಸಿದವರಾಗಿರಲಿಲ್ಲ, ಆದರೆ ಸುಗ್ಗಿಯ ಸಮಯದಲ್ಲಿ ಅದರ ಮೇಲೆ ದಾಳಿಮಾಡಿ, ತಮ್ಮೊಂದಿಗೆ ಸುಲಿಗೆಯನ್ನು ಮೂಟೆಮಾಡಿಕೊಂಡು ಹೊರಟು ಹೋಗುತ್ತಿದ್ದರು. ಇಸ್ರಾಯೇಲ್ಯರು ಬೆಟ್ಟಗಳಿಗೆ, ಗೋಡೆ ಗಳುಳ್ಳ ಪಟ್ಟಿಗಳಿಗೆ ಮತ್ತು ಗುಹೆಗಳಿಗೆ ಸಹ ಓಡಿಹೋಗುವಂತೆ ಮಾಡುವಷ್ಟು ಅವರ ದಾಳಿಗಳು ಭಯಂಕರವಾಗಿರುತ್ತಿದ್ದವು. ಮನಾಸ್ಸೆ ಕುಲದ ಗಿದ್ಯೋನನಲ್ಲಿ ದೇವರು ಒಬ್ಬ ವಿಮೋಚಕನನ್ನು ಎಬ್ಬಿಸಿದನು, ಅವನು ತನ್ನ ತಂದೆಯ ಮನೆಯಲ್ಲಿಯೂ ಗ್ರಾಮದಲ್ಲಿಯೂ ಬಾಳಿನ ಪೂಜೆಯನ್ನು ನಾಶಪಡಿಸುವುದರಿಂದ ಪ್ರಾರಂಭಿಸಿದನು. ಅನಂತರ ಅವನು ಮೂವತ್ತೆರಡು ಸಾವಿರ ಜನರ ಒಂದು ಸೈನ್ಯವನ್ನು ಕೂಡಿಸಿದನು, ಅಂಜುಬುರುಕರನ್ನು ಮನೆಗೆ ಹೋಗಲು ಬಿಟ್ಟು ಸೈನ್ಯವನ್ನು ಹತ್ತುಸಾವಿರಕ್ಕೆ ಇಳಿಸಿದನು; ಇದಕ್ಕೂ ಮುಂದೆ ಹೋಗಿ, ನೀರನ್ನು ಕೈಯಿಂದ ತೆಗೆದು ಕೊಂಡು ನೆಕ್ಕಿದ ಮುನ್ನೂರು ಜನರನ್ನು ಆಯ್ದುಕೊಂಡನು. ಈ ಚಿಕ್ಕ ಸೈನ್ಯದೊಂದಿಗೆ ರಾತ್ರಿ ಸಮಯದಲ್ಲಿ ದಾಳಿಮಾಡಿ ಮಿದ್ಯಾನ್ಯರಲ್ಲಿ ಅನೇಕರನ್ನು ಕೊಲ್ಲುತ್ತ, ಪೂರ್ವದ ಅರಣ್ಯದ ಅಂಚಿನ ವರೆಗೆ ಅವರನ್ನು ಬೆನ್ನಟ್ಟಿಕೊಂಡು ಹೋದನು. ಬಾರಾಕನ ಮತ್ತು ಗಿದ್ಯೋನನ ಎರಡೂ ಜಯಗಳು ಉತ್ತರದ ಗೋತ್ರಗಳಿಂದ ಜಯಿಸಲ್ಪಟ್ಟವು. ಎಫ್ರಾಯಿಮನ ಬಲಶಾಲಿ ಕೇಂದ್ರ ಗೋತ್ರವು ಈ ಜಯಗಳಲ್ಲಿ ತನ್ನ ಅಲ್ಪ ಪಾಲಿನಿಂದ ನಿರಾಶೆಗೊಂಡಿತು; ಮತ್ತು ಗಿದ್ಯೋನನು ಹೊಗಳಿಕೆಯ ಬುದ್ಧಿವಂತಿಕೆಯ ಪೆಟ್ಟಿನಿಂದ ಅವರ ನಿರಾಶೆಯನ್ನು ಶಾಂತಗೊಳಿಸಿದನು (ನ್ಯಾಯಸ್ಥಾಪಕರು 8:1-3). ಗಿದ್ಯೋನನು ಈ ಸಮಯದ ಶೂರನಾದನು. ಅವನನ್ನು ಅರಸನನ್ನಾಗಿ ಮಾಡಲು ನೋಡಿದರು ಆದರೆ ಅವನು ಅದನ್ನು ನಿರಾಕರಿಸಿದನು. ಅವನ ಹೆಚ್ಚು ಮಹತ್ವಾಕಾಂಕ್ಷೆಯ ಆದರೆ ಕಡಿಮೆ ಯೋಗ್ಯತೆಯ ಮಗ, ಅಬಿಮೆಲೆಕನು, ಒಬ್ಬನನ್ನು ಬಿಟ್ಟು ತನ್ನ ಎಲ್ಲಾ ಸಹೋದರರನ್ನು ಕೊಂದುಹಾಕಿದನು. ಮತ್ತು ಶೆಕೆಮಿನಲ್ಲಿ ಅಲ್ಪಕಾಲ ಸ್ಥಳಿಕ ಅರಸೊತ್ತಿಗೆಯನ್ನು ಪಡೆದುಕೊಂಡನು. ಒಂದು ದಂಗೆಯನ್ನು ಇಲ್ಲದಂತೆ ಮಾಡುತ್ತಿದ್ದಾಗ ಅವನು ತನ್ನ ಕಿರೀಟವನ್ನೂ ಪ್ರಾಣವನ್ನೂ ಕಳೆದುಕೊಂಡನು.

**5. ಪೂರ್ವದಿಂದ ಅಮ್ಮೋನಿಯರ ದಾಳಿ.**-ಮೋವಾಬ್ಯರಂಥೆ ಅಮ್ಮೋನಿಯರು ಲೋಟನ ವಂಶಜರಾಗಿದ್ದರು. ಯೊರ್ದನಿನ ಪೂರ್ವದ ಪ್ರದೇಶವನ್ನು ಜಯಿಸಿದಾಗ, ಪೂರ್ವದ ಅರಣ್ಯದಲ್ಲಿ ಅವರು ಗುಂಪುಗೂಡಿದರು. ಬೇಗನೇ ಪೂರ್ವದ ಗೋತ್ರಗಳ ಮೇಲೆ ಒತ್ತಡ ತರಲು ಪ್ರಾರಂಭಿಸಿದರು. ಯೆಪ್ತಾಹನು ವಿಮೋಚನೆಯ ಸಾಧನವಾದನು. ಇವನು ಪರಸ್ತ್ರೀಯಿಂದ ಜನಿಸಿದವನು, ಬಾಧ್ಯಸ್ಥಿಕೆಯನ್ನು ಕಳೆದು ಕೊಂಡವನು ಆಗಿದ್ದನು. ಅಮ್ಮೋನಿಯರನ್ನು ಹೊಡೆದೋಡಿಸಲು ಎಬ್ಬಿಸಲ್ಪಟ್ಟವರ ನಾಯಕತ್ವದಲ್ಲಿ ಇಡಲ್ಪಟ್ಟನು. ಯುದ್ಧಕ್ಕೆ ಹೋಗುವ ಮೊದಲು, ಯಶಸ್ವಿಯಾಗಿ ಬಂದರು, ಅವನು ತನ್ನ ಮನೆಗೆ

ಹಿಂದಿರುಗುವಾಗ ತನ್ನನ್ನು ಎದುರ್ಗೊಳ್ಳಲು ಮೊದಲು ಬರುವದನ್ನು ಯೆಹೋವನಿಗೆ ಸಮರ್ಪಿಸುವೆನೆಂದು ಹರಕೆ ಹೊತ್ತುಕೊಂಡನು. ಯುದ್ಧದಲ್ಲಿ ಅವನು ಗೆದ್ದನು, ಅವನ ಒಬ್ಬಳೇ ಮಗಳನ್ನು ಎದುರ್ಗೊಂಡನು ಮತ್ತು ಆಕೆಯ ಮೇಲಿದ್ದ ಹರಕೆಯನ್ನು ನೆರವೇ ರಿಸದನು.

**6. ದಕ್ಷಿಣ ಪಶ್ಚಿಮದಿಂದ ಫಿಲಿಷ್ಟಿಯರ ದಾಳಿ.**-ಫಿಲಿಷ್ಟಿಯರು ಮೆಡಿಟರೆನಿಯದ ಮೇಲೆ ಆಕ್ರಮ ಶಾಲಿ ವ್ಯಾಪಾರಸ್ತ ಜನಾಂಗವಾಗಿದ್ದರು. ಫೊಯಿನಿಕ್ಯರ ವಿರೋಧಿಗಳಾಗಿದ್ದರು ಒಂದು ಸಮಯದಲ್ಲಿ ಸೀದೋನನ್ನು ವಶಪಡಿಸಿಕೊಂಡರು. ಅದು ಅಂದಿನಿಂದ ತೂರಿಗೆ ಫೊಯಿನಿಕ್ಸದಲ್ಲಿ ಎರಡನೆಯ ಸ್ಥಾನಕ್ಕೆ ಇಳಿಯಿತು. ಫಿಲಿಷ್ಟಿಯರು ಬಹುಕಾಲದಿಂದ ಇಸ್ರಾಯೇಲಿನ ವೈರಿಗಳಾಗಿದ್ದರು, ನ್ಯಾಯಸ್ಥಾಪಕರ ಕಾಲದಲ್ಲೆಲ್ಲಾ ಅವರನ್ನು ಪೀಡಿ ಸುತ್ತಿದ್ದರು. ದಾವೀದನಿಂದ ಪರಿಣಾಮಕಾರಿಯಾಗಿ ಮುರಿಯಲ್ಪಡುವವರೆಗೂ ಅವರು ಅರಸೊತ್ತಿಕೆಯ ಕಾಲದಲ್ಲಿ ಪೀಡಿಸುತ್ತಿದ್ದರು. ದಕ್ಷಿಣದ ಗೋತ್ರಗಳು, ಸಿಮೆಯೋನ, ದಾನ ಮತ್ತು ಯೆಹೂದಗಳು ವಿಶೇಷವಾಗಿ ಅವರ ದಾಳಿಕೆಗಳಿಗೆ ಬಲಿಯಾಗಿದ್ದವು. ಕೊನೆಯ ಮತ್ತು ಕೆಲವು ವಿಷಯಗಳಲ್ಲಿ ಈ ಮಿಲಿಟರಿ ಶೂರರಲ್ಲಿ ಹೆಚ್ಚು ಗಮನಾರ್ಹ ವಾದವನು ಸಂಸೋನನು. ಇವನು ದಾನ ಕುಲದವನು. ನಾಜೀರನಾಗಿ[3] ಜನಿಸಿದನು. ಅಂದರೆ ಅಶುದ್ಧವಾದದ್ದನ್ನು ತಿನ್ನುವುದಿಲ್ಲ, ದ್ರಾಕ್ಷೆ ಹಣ್ಣನ್ನು ಉಪಯೋ ಗಿಸುವುದಿಲ್ಲ ಮತ್ತು ಅವನ ತಲೆಯ ಕೂದಲನ್ನು ಕತ್ತರಿಸುವುದಿಲ್ಲ ಎಂದು ಅವನು ತಾಯಿ ಪ್ರಮಾಣಮಾಡಿದ್ದಳು. ಅತೀಮಾನವ ಬಲದ ಕಾರ್ಯಗಳಲ್ಲಿ ಆನಂದಪಡುತ್ತ, ಆಗಾಗ ವಿಲಕ್ಷಣವಾಗಿರುತ್ತ ಇಬ್ರಿಯ ಹರ್ಕ್ಯುಲೆಸ್ ಆಗಿದ್ದನು, ಆದರೆ ಯಾವಾಗಲೂ ದೇಶಾಭಿಮಾನಿಯಾಗಿದ್ದನು, ದಕ್ಷಿಣಪೂರ್ವದ ಬೆಟ್ಟಗಳ ಮಧ್ಯದಲ್ಲಿಯ ತನ್ನ ಮನೆಯಿಂದ ಆಗಾಗ ಫಿಲಿಷ್ಟಿಯರಿಗೆ ಎದುರಿಸುತ್ತಿದ್ದನು, ಫಿಲಿಷ್ಟಿಯರ ಮಹಿಳೆಯರೊಂದಿಗೆ ಎರಡು ವಿವಾಹಗಳು, ಅವನ ಯಶಸ್ಸಿಗಾಗಿ ಮತ್ತು ಅಂತಿಮ ಪತನಕ್ಕಾಗಿ ಅವಕಾಶವನ್ನು ಒದಗಿಸಿಕೊಟ್ಟವು; ಯಾಕಂದರೆ ಸಂಸೋನನು ದೈತ್ಯಬಲಹೀನ ನಾಗಿದ್ದನು. ದೆಲಿಲಳ ಕುಯುಕ್ತಿಗಳಿಗೆ ಬಲಿಯಾಗಿ, ಅವನು ತನ್ನ ಬಲದ ರಹಸ್ಯವನ್ನು ಬಹಿರಂಗಪಡಿಸಿದನು, ಮತ್ತು ತನ್ನ ನಾಜೀರ ವೃತ್ತವನ್ನು ಮೀರಿ ತನ್ನ ಕೂದಲುಗಳನ್ನು ಕತ್ತರಿಸುವುದಕ್ಕೆ ಬಿಟ್ಟನು. ಅದು ಸಂಸೋನನನ್ನು ಅಪಮಾನಗೊಳಿಸಿದ ದೃಶ್ಯವಾಗಿತ್ತು. ಅವನ ಹೆಸರನ್ನು ಕೇಳಿದರೆ ಫಿಲಿಷ್ಟಿಯರು ನಡುಗುತ್ತಿದ್ದರು. ಅವನ ತಲೆಯು ದೆಲಿಲಳ ಮಡಿಲಿನಲ್ಲಿತ್ತು. ಅವಳ ಸಾಮೀಪ್ಯದಿಂದ ಅವನು ಹೊರಟು ಹೋದನು, ದೇವರಿಂದ ಕೈಬಿಡಲ್ಪಟ್ಟನು, ತನ್ನ ವೈರಿಗಳಿಗೆ ಆಹುತಿಯಾದನು, ಕುರುಡನಾಗಿ ಮಾಡಲ್ಪಟ್ಟನು, ಸೆರೆ ಮನೆಗೆ ದೊಬ್ಬಲ್ಪಟ್ಟನು, ಧಾನ್ಯಬೀಸುವ ಮಹಿಳೆಯರ ಕೆಲಸಕ್ಕೆ ನೇಮಿಸಲ್ಪಟ್ಟನು. ತನ್ನ ಹರಕೆಯನ್ನು ನವೀಕರಿಸುವ, ತನ್ನ ಬಲವನ್ನು ಪುನಃ ಹೊಂದಿಕೊಳ್ಳುವ ಅವಕಾಶ ಅವನಿಗಿತ್ತು. ಫಿಲಿಷ್ಟಿಯರ ಹಬ್ಬದ ಸಮಯದಲ್ಲಿ ಅವರು ತಮ್ಮ ದಾಗೋನ ದೇವರಿಗೆ ಉತ್ಸವ ಮಾಡುವಾಗ ಜನರ ಮನರಂಜನೆಗಾಗಿ ಅವನನ್ನು ಹೊರಗೆ ತಂದರು, ಸ್ವಿಸ್ ವಿಂಕೆಲ್ರೈರ್ಡನಂತೆ, ಅವನು ತನ್ನ ದೇಶದ ಬಿಡುಗಡೆಗಾಗಿ ತನ್ನ ಜೀವಿತವನ್ನು ಪ್ರತಿಷ್ಠಿಸಿದ್ದನು. ದೇವಾಲಯದ ಮಧ್ಯದಲ್ಲಿಯ ಸ್ಥಂಭವನ್ನು ಬಲವಾಗಿ ದೂಡಿದಾಗ, ತನ್ನ ವೈರಿಗಳ ಸಾವಿರಾರು ಸಜೀವ ಸಮಾಧಿಗಳಲ್ಲಿ ತನ್ನನ್ನು ಹೂಣಿಟ್ಟುಕೊಂಡನು. ಫಿಲಿಷ್ಟಿಯರ ಬಲವು ಮುರಿಯಲ್ಪಡಲಿಲ್ಲ; ಆದರೆ ಅವನ ಸಾಹಸಕಾರ್ಯಗಳು ಇಸ್ರಾಯೇಲ್ಯರಲ್ಲಿ ಧೈರ್ಯವನ್ನು ಪುನಃ ಹುಟ್ಟಿಸಲು ಮತ್ತು ಸಮುವೇಲ ಹಾಗೂ ದಾವೀದರ ಕಾರ್ಯವನ್ನು ಹೆಚ್ಚು ಸ್ಥಿರವಾಗುವಂತೆ ಸಾಧ್ಯಮಾಡಲು ಬಹಳ ಸಹಾಯ ಮಾಡಿದವು.